# ಅಂಗವಿಕಲ ಮಾಶಾಸನ

| | | |
|---|---|---|
| 1 | ಅಂಗವಿಕಲ ಮಾಶಾಸನ ಯೋಜನೆ ಯಾವಾಗ ಜಾರಿಗೆ ಬಂದಿದೆ? | ಸರಕಾರದ ಆದೇಶ ನಂ.ಎಸ್ ಡಬ್ಲ್ಯೂ ಎಲ್ 146 ಪಿ ಹೆಚ್ ಪಿ 77 ದಿನಾಂಕ:7.11.1977ರನ್ವಯ ಈ ಯೋಜನೆ ಜಾರಿಗೆ ಬಂದಿದೆ. |
| 2 | ಅಂಗವಿಕಲ ಮಾಶಾಸನ ಮಂಜೂರ ಮಾಡುವ ಅಧಿಕಾರಿ ಯಾರು? | ಸರಕಾರಿ ಆದೇಶ ಸಂ.ಎಸ್ ಡಬ್ಲ್ಯೂ ಎಲ್ 91 ಪಿಹೆಚ್ ಪಿ 79 ಬೆಂಗಳೂರು ದಿನಾಂಕ:2 ಮೇ 1979ರನ್ವಯ ಆಯಾ ತಾಲೂಕಿನ ತಹಶೀಲ್ದಾರರಿಗೆ ಹಾಗೂ ಸರಕಾರದ ಆದೇಶ ಸಂಖ್ಯೆ ಆರ್ ಡಿ 93 ಎಎಸ್ ಡಿ 86 (ಭಗ) ದಿ:15.10. 1986 ರನ್ವಯ ನಾಡ ಕಚೇರಿ ಶಿರಸ್ತೇದಾರ ರುಗಳಿಗೆ ಪ್ರತ್ಯಾಯೋಜಿಸಲಾಗಿದೆ. |
| 3 | ಅಂಗವಿಕಲ ನಿರ್ವಾಹಣಾ ಭತ್ಯೆ ಎಷ್ಟು? | ಸರಕಾರಿ ಆದೇಶ ಸಂ.ಕಂಇ.134 ಎಂ ಎಸ್ ಟಿ 2007 ದಿ:10/9/2007ರ ಪ್ರಕಾರ ಅಂಗವಿಕಲರಿಗೆ ಹಾಲಿ ನೀಡುತ್ತಿರುವ ಮಾಸಿಕ ನಿರ್ವಹಣಾ ಭತ್ಯೆಯನ್ನು ದಿ:1.4.2007 ರಿಂದ ಜಾರಿಗೆ ಬರುವಂತೆ ರೂ.200 ದಿಂದ ರೂ.400 ಗಳಾಗಿದೆ. |
| 3 | ಅರ್ಜಿಸಲ್ಲಿಸುವ ವಿಧಾನ ಹೇಗೆ? | ಅಂಗವಿಕಲ ವೇತನ ಅರ್ಜಿ ನಮುನೆ -2 ರಲ್ಲಿ ದ್ವಿ ಪ್ರತಿಯಲ್ಲಿ ಅರ್ಜಿಯನ್ನು ತಹಶೀಲ್ದಾದಾರರಿಗೆ ಸಲ್ಲಿಸಬೇಕು. |
| 4 | ಅಂಗವಿಕಲತೆ ಇದ್ದ ಬಗ್ಗೆ ದೃಢೀಕರಣ ಪ್ರಮಾಣ ಪತ್ರ ಯಾರು ನೀಡುವರು? | ಸರಕಾರಿ ವೈದ್ಯಾಧಿಕಾರಿಗಳಿಂದ ದೃಢೀಕರಣ ಪ್ರಮಾಣ ಪತ್ರ ಪಡೆದುಕೊಂಡು ಅರ್ಜಿಗೆ ಜೋಡಿಸಿ ಸಲ್ಲಿಸಬೇಕು. |
| 5 | ರಹವಾಸಿ ಪ್ರಮಾಣ ಪತ್ರ ಅವಶ್ಯಕವೋ? | ಕರ್ನಾಟಕದಲ್ಲಿ ಕಳೆದ 5 ವರ್ಷ ರಹವಾಸಿ ಇದ್ದ ಬಗ್ಗೆ ದಾಖಲೆ ಲಗತ್ತಿಸುವುದು. |
| 6 | ಆದಾಯ / ಆದಾಯ ಮಿತಿ ಎಷ್ಟಿರಬೇಕು? | 1) ಸ್ವಂತ ಆದಾಯ ಹೊಂದಿರಬಾರದು<br>2) ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ರೂ.6000/- ಕ್ಕಿಂತ ಮೀರಿರಬಾರದು. |
| 7 | ಗುರುತಿನ ದಾಖಲೆ ಯಾರಿಂದ ಪಡೆಯಬೇಕು? | ಲೋಕಸಭಾ ಸದಸ್ಯರು/ರಾಜ್ಯ ಸಭಾ ಸದಸ್ಯರು ಶಾಸಕರು, ವಿಧಾನ ಪರಿಷತ್ ಸದಸ್ಯರು / ನಗರಸಭೆ ಸದಸ್ಯರು/ ಗ್ರಾಮ ಪಂ.ಅಧ್ಯಕ್ಷರು ಕೇಂದ್ರ ಅಥವಾ ರಾಜ್ಯ ಸರಕಾರದ ಪತ್ರಾಂಕಿತ ಅಧಿಕಾರಿಗಳು ಇದರಲ್ಲಿ ಯಾರಾದರೊಬ್ಬರು ನೀಡಿದ ಗುರುತಿನ ದಾಖಲೆ ಹೊಂದಿರಬೇಕು. |
| 8 | ಅರ್ಜಿ ವಿಲೇವಾರಿಗೆ ನಿಗಧಿಪಡಿಸಿದ ಕಾಲಮಿತಿ ಎಷ್ಟು? | 30 ದಿನಗಳ ಕಾಲಮಿತಿಯನ್ನು ನಿಗದಿಪಡಿಸಿದೆ. |